# ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ
## ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 06–01–2024** **ಸಮಯ : 2½ ಘಂಟೆ**

**ತರಗತಿ : X** **ಅಂಕ : 80**

---

**ಸೂಚನೆ:** ಉತ್ತರ ಪತ್ರಿಕೆಯಲ್ಲಿ ***ರಿಜಿಸ್ಟರ್ ನಂಬರ್*** ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

---

**I. ಆವರಣದಿಂದ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ:** **10x1=10**

1. ಪ್ರತಿ ವ್ಯಕ್ತಿ ತನ್ನ ______ ಬಗ್ಗೆ ಪರಿಜ್ಞಾನ ಉಳ್ಳವನಾಗಿರಬೇಕು.
   (ಅಂತಸ್ತು; ಸ್ವಂತ ವ್ಯಕ್ತಿತ್ವ; ಸಂಪತ್ತು)
2. ಕೆಲಸಕ್ಕೆ ಸಮಯವಿರಲಿ ________ ಬೆಲೆ ಅದು.
   (ಯಶಸ್ಸಿನ; ಸುಜ್ಞಾನದ; ಶಕ್ತಿಯ)
3. ಸ್ವಾರ್ಥಿಗಳ ಗೆಳೆತನ ________.
   (ದೀರ್ಘಕಾಲಿಕ; ನಿರಂತರ; ಅಲ್ಪಕಾಲಿಕ)
4. ______ ನಮ್ಮ ವ್ಯಕ್ತಿತ್ವಕ್ಕೆ ತನ್ನತನದ ಮುದ್ರೆಯನ್ನು ಒತ್ತುತ್ತದೆ.
   (ಸಂವೇದನೆ; ದೀನತೆ; ಅಹಂಕಾರ)
5. ______ ಅಮೂಲ್ಯ ಕೊಡುಗೆ. ಅದನ್ನು ಎಚ್ಚರಿಕೆಯಿಂದ, ವಿವೇಚನೆಯಿಂದ ವಿನಿಮಯಿಸಬೇಕು.
   (ಹಣ; ವಿದ್ಯೆ; ಸಮಯ)
6. ನಮ್ಮ ಬಾಳನ್ನು ಪುನಃ ಕೇಂದ್ರೀಕರಿಸಲು ಸಹಾಯಕವಾಗುವವು ______.
   (ಸಮಾರಂಭ; ಸಹಕಾರ; ಕರುಣೆ)
7. ತನ್ನ ಧರ್ಮವನ್ನು ಅನುಸರಿಸುವಾಗ ಇತರ ಧರ್ಮದ ಸಂಪ್ರದಾಯ, ಸಂಸ್ಕೃತಿಯನ್ನು ಗೌರವಿಸುವುದು ________
   (ಒಳ್ಳೆಯ ಅಭ್ಯಾಸ; ಸಮಾಜ ವಾದ; ಸಾರ್ವತ್ರಿಕ ವಾದ)
8. ಮುಖಂಡನು ನೀತಿ ನ್ಯಾಯದ ವ್ಯಕ್ತಿಯಾಗಿದ್ದು ತನ್ನ ನಡವಳಿಕೆಯಲ್ಲಿ ______ ಬಿಂಬಿಸಬೇಕು.
   (ವೈವಿಧ್ಯತೆಯನ್ನು; ವಿಶಿಷ್ಟತೆಯನ್ನು; ನಿಷ್ಪಕ್ಷಪಾತ)
9. ಇಷ್ಟವುಳ್ಳ ಧರ್ಮದಲ್ಲಿ ನಂಬಿಕೆಯಿಡುವ ಮತ್ತು ದೇವರನ್ನು ಪೂಜಿಸುವ ಹಕ್ಕು ________.
   (ರಾಜಕೀಯ; ಧಾರ್ಮಿಕ; ಸಾಂಸ್ಕೃತಿಕ)
10. ______ ಸಂತೋಷ ಮತ್ತು ಆರೋಗ್ಯಕರ ಜೀವನದ ಕೀಲಿ.
    (ಸಮಯ ಪ್ರಜ್ಞೆ; ಸಂವೇದನಾಶೀಲತೆ; ಸಾರ್ವತ್ರಿಕವಾದ)

**II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿಸಿರಿ: 5x1=5**

1. ________ ಗೆಳೆತನಕ್ಕೆ ಶೋಭೆಯನ್ನು ತರುತ್ತದೆ.
2. __________ ಸಹಜವಾದವು ಮತ್ತು ಪರಭಾರೆ ಮಾಡಲಾಗದ ಹಕ್ಕುಗಳು.
3. ಪ್ರತಿಯೊಬ್ಬರು __________ಗಾಗಿ ಹಾತೊರೆಯುತ್ತಾರೆ.
4. ನಮ್ಮ ಗಾತ್ರ, ಎತ್ತರ, ತೂಕ, ಬಣ್ಣ ಮತ್ತು ದೈವಿಕ ರಚನೆಯನ್ನು ನಿರ್ಧರಿಸುವ ಜನನ __________
5. ಸರಿ ಮತ್ತು ತಪ್ಪುಗಳನ್ನು ಕಂಡುಕೊಳ್ಳುವ ನಿಪುಣತೆಯೇ ________.

**III. ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೇ ಪದಕ್ಕೆ ಸರಿ ಸಂಬಂಧ ಹೊಂದುವ ಪದವನ್ನು ಬರೆಯಿರಿ: 5x1=5**

1. ದಿನದ ಬೆಲೆ : **ಕಾರ್ಮಿಕ** :: ವರ್ಷದ ಬೆಲೆ : ________
2. ಆಟಕ್ಕೆ ಸಮಯ : **ಯೌವ್ವನದ ರಹಸ್ಯ** :: ನಗಲು ಸಮಯ : ________
3. ನಾಳೆ ಎಂಬುದು : **ವಾಗ್ದಾನ ಪತ್ರ** : ಇಂದು ಎಂಬುದು : ________.
4. ಮಾತನಾಡುವ ಮೊದಲು : **ಆಲಿಸು** :: ಬರೆಯುವ ಮೊದಲು : ________
5. ನಿದ್ರೆಗೆ : **20 ವರ್ಷ** :: ಕೆಲಸಕ್ಕೆ : ________.

**IV. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ: 5x1=5**

1. ಸಾಮಾಜಿಕ ಪರಿಜ್ಞಾನ ಎಂದರೇನು?
2. ದೀನತೆ ಎಂದರೇನು?
3. ನಾಲ್ಕು ವಿಧದ ಜನನಗಳ ಬಗ್ಗೆ ಬರೆಯಿರಿ.
4. ಮುಖಂಡ ಎಂದರೆ ಯಾರು?
5. ಮಾನವ ಹಕ್ಕುಗಳು ಎಂದರೇನು?

**V. ಯಾವುದಾದರೂ ಐದು ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ: 5x2=10**

1. ಸಂವೇದಿಸುತ್ತಿರುವಾಗ ನೀವು ಮಾಡಬೇಕಾದ ಅಂಶಗಳು ಯಾವುವು?
2. 'ದೀನತೆ' 'ಒಂದು ಸುಗುಣ' ಇದಕ್ಕೆ 3 ಕಾರಣಗಳನ್ನು ಬರೆಯಿರಿ.
3. ಪ್ರೇರಿತ ಜನನವು ಏನನ್ನು ನಿರ್ಧರಿಸುತ್ತದೆ?
4. ಮಾನವ ಹಕ್ಕುಗಳು ಸಾರ್ವತ್ರಿಕವಾದವುಗಳು ಏಕೆ?
5. ಗೆಳೆತನವನ್ನು ಉಳಿಸಿಕೊಳ್ಳಲು ಯಾವ ದುರ್ಗುಣಗಳನ್ನು ಬಿಡಬೇಕು?
6. ಮದರ್ ತೆರೇಸಾರವರು ಜೀವಂತ ಸಂತರೆಂದು ಪ್ರಖ್ಯಾತರಾಗಲು ಕಾರಣವೇನು?

**VI. ಯಾವುದಾದರೂ ಆರು ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿರಿ: 6x3=18**

1. ಸಮಯವನ್ನು ಪೋಲು ಮಾಡುವ ಕಾರಣಗಳನ್ನು ಪಟ್ಟಿ ಮಾಡಿ ಬರೆಯಿರಿ.
2. ಗೆಳೆತನ ಕಾಪಾಡುವ ಸೂತ್ರಗಳಾವುವು?
3. ಅಂಬೇಡ್ಕರ್‌ರವರ ಬಗ್ಗೆ ಟಿಪ್ಪಣಿ ಬರೆಯಿರಿ.
4. ಸಾಮಾಜಿಕ ಪರಿಜ್ಞಾನದ ತೋರಿಕೆಗಳು ಯಾವುವು?
5. ಪ್ರಜಾಪ್ರಭುತ್ವ ಸರಕಾರ ಕಾರ್ಯರೂಪಕ್ಕೆ ತರುವ ಆರು ಬಗೆಯ ಹಕ್ಕುಗಳು ಯಾವುವು?
6. ಸಂವೇದನಾಶೀಲತೆಯನ್ನು ನಾವು ಹೇಗೆ ಬೆಳೆಸಿಕೊಳ್ಳಬಹುದು?
7. ಸಮಯದ ಉಪಯುಕ್ತ ಬಳಕೆಯನ್ನು ಹೇಗೆ ಮಾಡಬಹುದು?

**VII. ಯಾವುದಾದರೂ ಒಂದು ವಿಷಯದ ಬಗ್ಗೆ ವಿವರಿಸಿ ಬರೆಯಿರಿ: 1x5=5**

1. ಸಮಯ ನಮ್ಮ ಆಸ್ತಿ
2. ವೈವಿಧ್ಯತೆಯಲ್ಲಿ ಐಕ್ಯತೆ
3. ಅತ್ಯುತ್ತಮ ಆಭರಣ ದೀನತೆ

**VIII. ಯಾವುದಾದರೂ ಎರಡು ಪ್ರಶ್ನೆಗಳಿಗೆ ನಿಮ್ಮ ಸ್ವಂತ ವಾಕ್ಯಗಳಲ್ಲಿ ಉತ್ತರಿಸಿರಿ: 2x5=10**

1. ಸಮಾಜ ಸೇವೆ
2. ಪ್ರಾರ್ಥನೆ ಮತ್ತು ಧ್ಯಾನ
3. ವಿದ್ಯಾಭ್ಯಾಸ

**IX. ಕೆಳಗಿನ ಯಾವುದಾದರೂ ಎರಡು ಸಮಸ್ಯೆಗಳಿಗೆ ಪರಿಹಾರ ನೀಡಿರಿ: 2x6=12**

1. ಸೌಮ್ಯ ಒಬ್ಬಳು ಬುದ್ಧಿವಂತೆ ಹಾಗೂ ಸುಂದರಿ ಆದ ವಿದ್ಯಾರ್ಥಿನಿ. ಅವಳು ತನ್ನ ಸೌಂದರ್ಯದ ಅಹಂ ಭಾವದಿಂದ ಇನ್ನಿತರ ವಿದ್ಯಾರ್ಥಿನಿಯರನ್ನು ಕೀಳಾಗಿ ಕಾಣುತ್ತಿದ್ದಳು. ಒಂದು ದಿನ ತನ್ನ ಕೆಲವು ಕೆಟ್ಟ ಚಾಳಿಗಳಿಂದ ಅವಳು ತನ್ನ ಆರೋಗ್ಯವನ್ನು ಕೆಡಿಸಿಕೊಂಡಳು ಮತ್ತು ಅವಳು ಮನೆಯಲ್ಲಿಯೇ ಹಲವಾರು ತಿಂಗಳುಗಳ ಕಾಲ ಉಳಿಯಬೇಕಾಯಿತು. ಅವಳನ್ನು ನೋಡಲು ಹಾಗೂ ಸಮಾಧಾನಪಡಿಸಲು ಅವಳೊಡನೆ ಗೆಳತಿಯರು ಬರಲಿಲ್ಲ. ಆದರೆ ಅವಳ ತರಗತಿಯ ಇತರ ವಿದ್ಯಾರ್ಥಿನಿಯರು ಅವಳ ಬಳಿ ಬಂದು ಅವಳ ಆರೋಗ್ಯದ ಬಗ್ಗೆ ತಿಳಿದು ಅವಳಿಗೆ ಸಮಾಧಾನಪಡಿಸುತ್ತಿದ್ದರು.

   **a. i) ಸೌಮ್ಯಳ ನಡತೆಯ ಬಗ್ಗೆ ನಿನ್ನ ಅನಿಸಿಕೆ ಏನು? ಎರಡು ಅನಿಸಿಕೆಗಳನ್ನು ಬರೆ**

   **b. i) ಗೆಳೆತನ ಎಂದರೇನು?**

   **ii) ಸೌಮ್ಯಳ ನಿಜವಾದ ಗೆಳತಿಯರು ಯಾರು?**

   **c. ಸೌಮ್ಯಳಿಗೆ ನಿನ್ನ ಬುದ್ಧಿವಾದ ಏನು? ಎರಡು ಸಂಗತಿಗಳನ್ನು ಬರೆ.**

2. ತಾರಾ ಹತ್ತನೇ ತರಗತಿಯ ವಿದ್ಯಾರ್ಥಿನಿ. ಪ್ರತಿನಿತ್ಯ ಶಾಲೆಗೆ ಸರಕಾರಿ ಬಸ್ಸಿನಲ್ಲಿ ಪ್ರಯಾಣಿಸುತ್ತಾಳೆ. ಬಸ್ಸಿನಲ್ಲಿ ಮುದುಕ, ಮುದುಕಿಯರನ್ನು, ದುರ್ಬಲರನ್ನು, ಚಿಕ್ಕ ಮಕ್ಕಳನ್ನು ಎತ್ತಿಕೊಂಡ ತಾಯಂದಿರನ್ನು ಕಂಡಾಗ ತನ್ನ ಸೀಟನ್ನು ಅವರಿಗೆ ಬಿಟ್ಟುಕೊಡುತ್ತಿದ್ದಳು. ಆದರೆ ಇತ್ತೀಚಿನ ದಿನಗಳಲ್ಲಿ ಅಂತವರನ್ನು ಬಸ್ಸಿನಲ್ಲಿ ಕಂಡಾಗ ಕಂಡು ಕಾಣದಂತೆ ಸೀಟಲ್ಲಿ ಕುಳಿತಿರುತ್ತಾಳೆ.

**a. i)** **ತಾರಾಳ ವರ್ತನೆ ಸರಿಯೇ?**

**ii)** **ಏಕೆ?**

**b. i)** **ನೀನು ತಾರಾಳ ಸ್ಥಾನದಲ್ಲಿ ಇರುತ್ತಿದ್ದರೆ ಏನು ಮಾಡುತ್ತಿದ್ದಿ?**

**ii)** **ಏಕೆ?**

**c. i)** **ಇತರರ ಕಷ್ಟಗಳಿಗೆ ನಾವು ಸ್ಪಂದಿಸಬೇಕೆ?**

**ii)** **ಏಕೆ?**

3. ಕಾರ್ತಿಕ್ ಶಾಲಾ ನಾಯಕನಾಗಿ ಚುನಾಯಿತನಾಗಿದ್ದನು. ಅವನು ಅಧಿಕಾರ ಮತ್ತು ಹುದ್ದೆಯ ಆಸೆಯಿಂದ ಚುನಾವಣೆಯಲ್ಲಿ ಸ್ಪರ್ಧಿಸಿದ್ದನು. ಆದರೆ ಜವಾಬ್ದಾರಿಗಳನ್ನು ಮತ್ತು ಕೆಲಸಗಳನ್ನು ವಹಿಸಿಕೊಳ್ಳಲು ಹಿಂಜರಿಯುತ್ತಿದ್ದನು. ಕೆಲವರೊಡನೆ ಮಾತ್ರ ಸ್ನೇಹದಿಂದ ಇರುವನು. ಆತ ತನ್ನ ಆತ್ಮೀಯ ಗೆಳೆಯರ ದೂರುಗಳನ್ನು, ತಪ್ಪುಗಳನ್ನು ಶಿಕ್ಷಕರಿಗೆ ತಿಳಿಸುವುದಿಲ್ಲ. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಯೋಜಿಸುವಲ್ಲಿ ಆತನಿಗೆ ಆಸಕ್ತಿ ಇರಲಿಲ್ಲ.

**a. i)** **ಶಾಲಾ ನಾಯಕನಾಗಿ ಕಾರ್ತಿಕ್‌ನ ಜವಾಬ್ದಾರಿಗಳೇನು?**

**ii)** **ಅವುಗಳನ್ನು ಆತ ಹೇಗೆ ನಿಭಾಯಿಸಬೇಕು?**

**b. i)** **ಒಬ್ಬ ಮುಖಂಡನಲ್ಲಿ ಇರಬೇಕಾದ ಯಾವುದಾದರೂ ಎರಡು ಮುಖ್ಯ ಗುಣಗಳು ಯಾವುವು?**

**ii)** **ಆತನು ತನ್ನ ತಂಡವನ್ನು ಹೇಗೆ ನಡೆಸಿಕೊಳ್ಳಬೇಕು?**

**c.** **ನೀನು ಶಾಲಾ ನಾಯಕನಾದರೆ ನಿನ್ನ ಕರ್ತವ್ಯಗಳನ್ನು ಹೇಗೆ ನಿಭಾಯಿಸಬಲ್ಲೆ?**